ತಲಾ 10 ಎಂ.ವಿ.ಎ. ಸಾಮರ್ಥ್ಯದ ವಿವರ 110:33 ಕೆ.ವಿ. ಪವರ್ ಟ್ರಾನ್ಸ್‌ಫಾರ್ಮರ್ ಮತ್ತು ಒಂದು 10 ಎಂ.ವಿ.ಎ. ಸಾಮರ್ಥ್ಯದ 110:11 ಕೆ.ವಿ. ಪವರ್ ಟ್ರಾನ್ಸ್‌ಫಾರ್ಮರ್‌ನ್ನು ಈ ಕೇಂದ್ರದಲ್ಲಿ ಸ್ಥಾಪಿಸಲಾಗುವುದು.

(ಇ) ನಿರ್ಮಾಣಕಾರ್ಯವು ಡಿಸೆಂಬರ್ 95 ರಲ್ಲಿ ಪ್ರಾರಂಭ ಗೊಂಡಿತು. ಕಂಟ್ರೋಲ್‌ರೂಂನ ಕೆಲಸವು ಪೂರ್ಣಗೊಂಡಿದೆ. ಇತರೆ ಕೆಲಸಗಳು ಪ್ರಗತಿಯಲ್ಲಿವೆ. ಡಿಸೆಂಬರ್ 96ರ ಅಂತ್ಯದಲ್ಲಿರುವಂತೆ ರೂ:331.14 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

(ಈ) ಈ ಹಿಂದೆ ಅಕ್ಟೋಬರ್ 96ರ ಅಂತ್ಯದೊಳಗೆ ಈ ಕೆಲಸವನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿತ್ತು. ಆದರೆ ತೀವ್ರ ಆರ್ಥಿಕ ಮುಗ್ಗಟ್ಟಿನಿಂದಾಗಿ ವಿಳಂಬವು ಅನಿವಾರ್ಯವಾಯಿತು.

(ಉ) ಉಳಿದ ಎಲ್ಲ ಕೆಲಸಗಳನ್ನು ಪೂರ್ಣಗೊಳಿಸಿ ಜೂನ್ 1997ರ ಅಂತ್ಯದ ವೇಳೆಗೆ ಈ ಕೇಂದ್ರವನ್ನು ಚಾಲನೆ ಗೊಳಿಸುವ ಉದ್ದೇಶ ಹೊಂದಿದೆ. ಅದಾಗ್ಯೂ, ಇದು ಲಭ್ಯವಾಗುವ ಆರ್ಥಿಕತೆಯನ್ನು ಅವಲಂಭಿಸಿದೆ.

ತುಂಗ ಮೇಲ್ದಂಡೆ ಯೋಜನೆ

234(153) ಶ್ರೀ ಮಂಜುನಾಥ ಸಿ.ಕುನ್ನೂರ.(ಶಿಗ್ಗಾಂವ್):

ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ತುಂಗಾ ಮೇಲ್ದಂಡೆ ಯೋಜನೆ ಯಾವಾಗಿನಿಂದ ಜಾರಿಗೆ ಬಂದಿದೆ (ಯೋಜನೆಯ ಸಂಪೂರ್ಣ ವಿವರ ನೀಡುವುದು);

(ಆ) ಸದರಿ ಯೋಜನೆಗೆ ಈವರೆಗೂ ಆದ ವೆಚ್ಚವೆಷ್ಟು;

(ಇ) ಸದರಿ ಯೋಜನೆ ಪೂರ್ಣಗೊಳ್ಳಲು ಎಷ್ಟು ಹಣ ಬೇಕಾಗುವುದು;

(ಈ) ಸದರಿ ಯೋಜನೆಯನ್ನು ಕೈಗೊಳ್ಳುವಾಗ ಮಾಲತಿ ಜಲಾನಯನವನ್ನು ಬಿಟ್ಟಿರುವ ಉದ್ದೇಶವೇನು?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು.)

(ಅ) ರೂ.271.41 ಕೋಟಿ ಅಂದಾಜಿನ 94,698 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುವ ತುಂಗಾ ಮೇಲ್ದಂಡೆ ಯೋಜನೆಗೆ ಅಕ್ಟೋಬರ್ 91ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

(ಆ) ಸದರಿ ಯೋಜನೆಗೆ ಪ್ರಾರಂಭದಿಂದ ಡಿಸೆಂಬರ್ 96ರ ಅಂತ್ಯದವರೆಗೂ ರೂ. 1338.5 ಲಕ್ಷ ವೆಚ್ಚ ಭರಿಸಲಾಗಿದೆ.

(ಇ) ಸದರಿ ಯೋಜನೆಯನ್ನು ಪೂರ್ಣಗೊಳಿಸಲು 1996-97ನೇ ಸಾಲಿನ ದರಗಳ ಪ್ರಕಾರ ಸುಮಾರು ರೂ.699 ಕೋಟಿ ಬೇಕಾಗುತ್ತದೆ.

(ಈ) ಮಾಲತಿ ಡ್ಯಾಂ ನಿರ್ಮಾಣದಿಂದ 10141 ಹೆಕ್ಟೇರ್ ಜಮೀನು ಮುಳುಗಡೆಯಾಗುತ್ತಲ್ಲಿದ್ದು ಈ ಪೈಕಿ 697 ಹೆಕ್ಟೇರ್ ಅರಣ್ಯ ಪ್ರದೇಶ ಒಳಗೊಂಡಿರುತ್ತದೆ ಹಾಗೂ 25 ಹಳ್ಳಿಗಳು ತೊಂದರೆಗೊಳಗಾಗುತ್ತಲಿದ್ದವು. ಅದರಿಂದ ಮಾಲತಿ ಜಲಾಶಯವನ್ನು ಕೈ ಬಿಡಲಾಯಿತು. ಈ ಜಲಾಶಯ ನಿರ್ಮಾಣದಿಂದ ಸಂಪೂರ್ಣ ಪ್ರದೇಶವನ್ನು ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಅಳವಡಿಸಲಾಗಿದೆ.